

ಮುಂದುವರಿದ. ಇನ್ನು ಯಾರಿಗೂ ಉತ್ತರಿಸಬಾರದೆಂದು ಅವನು ನಿಶ್ಚಯಿಸಿದ.

ಮೋಟಾರು ಸೈಕಲ್ಲಿನಲ್ಲಿ ಬಂದ ಪೋಲಿಸರ ತಂಡವೊಂದು ಮೆರವಣಿಗೆಯನ್ನು ನಿಲ್ಲಿಸಿ ಹಳೆಯ ಪಿಯಾನೊವನ್ನು ಸುತ್ತುವರಿದು ನಿಂತಿತು. ಯಾವೋ ದೆ ಒಲಿವೈರಾ ವಿವರವಾದ ಒಂದು ವಿವರಣೆ ಕೊಟ್ಟ. ಅವರು ಸಂಬಂಧಿಸಿದ ಕಾಗದಪತ್ರ ನೋಡ ಬಯಸಿದರು. ಅವನು ಮನೆಗೆ ಮರಳಿ ಅವುಗಳನ್ನು ತಂದುಕೊಟ್ಟ. ದೇಶದಲ್ಲಿ ಯುದ್ಧ ನಡೆಯುತ್ತಿದ್ದುದರಿಂದ ಈ ರೀತಿಯ ವಿಚಾರಣೆಗಳು ನಡೆಯುತ್ತಿರುವುದು ಅತ್ಯಂತ ಸಹಜ ಎಂದುಕೊಂಡನವನು. ಆದರೂ ಅವನೊಂದು ವಿವರಣೆ ಕೊಡಬೇಕಾಗಿ ಬಂದುದರ ಬಗ್ಗೆ ಅಸಮಾಧಾನಪಟ್ಟ. ಯಾಕೆಂದರೆ ತನ್ನ ಮನೆಯವರಿಗಲ್ಲದೆ ಬೇರೆಯವರಿಗೆ ವಿವರಣೆ ಕೊಡುವ ಅಗತ್ಯವಿಲ್ಲ ಎಂದು ವೈಯಕ್ತಿಕವಾಗಿ